## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 16 (67) |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17.08.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ವಿವರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು; ಎಷ್ಟು ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ; ಮತ್ತು ಎಷ್ಟು ಶಾಲೆಗಳು ಬಾಡಿಗೆ ಕಟ್ಟಡದಲ್ಲಿ<br>ಕಾರ್ಯನಿರ್ವಹಿಸುತ್ತಿವೆ; ಕಳೆದ ಮೂರು ವರ್ಷಗಳಲ್ಲಿ ನಿರ್ಮಾಣವಾದ ಪ್ರೌಢಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);</td><td>ರಾಜ್ಯದಲ್ಲಿ ಒಟ್ಟು 5024 ಸರ್ಕಾರಿ ಪ್ರೌಢಶಾಲೆಗಳ ಕಾರ್ಯನಿರ್ವಹಿಸುತ್ತಿವೆ.<br><br>ಸದರಿ ಶಾಲೆಗಳು ಸ್ವಂತ/ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಮಾಹಿತಿ ಈ ಕೆಳಕಂಡಂತಿದೆ;<br><br>
<table>
<tr><th>ಸ್ವಂತ ಕಟ್ಟಡ</th><th>ಬಾಡಿಗೆ ಕಟ್ಟಡ</th><th>ಬಾಡಿಗೆ ರಹಿತ ಕಟ್ಟಡ</th></tr>
<tr><td>4966</td><td>09</td><td>49</td></tr>
</table>
<br>ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಕಳೆದ 03 ವರ್ಷಗಳಲ್ಲಿ ಅನುಮೋದನೆಯಾದ ಪ್ರೌಢಶಾಲಾ ಕಟ್ಟಡಗಳ ಸಂಖ್ಯೆ ಈ ಕೆಳಕಂಡಂತಿದೆ;<br><br>
<table>
<tr><th rowspan="2">ಸಾಲು</th><th rowspan="2">ಜಿಲ್ಲೆ</th><th colspan="2">ಅನುಮೋದನೆ</th><th rowspan="2">ಪ್ರಗತಿ ವಿವರ</th></tr>
<tr><th>Phy</th><th>Fin</th></tr>
<tr><td rowspan="6">2023-24</td><td>ರಾಯಚೂರು</td><td>3</td><td>535.14</td><td>ಪ್ರಗತಿಯಲ್ಲಿದೆ</td></tr>
<tr><td>ಹಾವೇರಿ</td><td>1</td><td>178.38</td><td>ಪ್ರಗತಿಯಲ್ಲಿದೆ</td></tr>
<tr><td>ಬಾಗಲಕೋಟೆ</td><td>1</td><td>178+.38</td><td>ಪ್ರಗತಿಯಲ್ಲಿದೆ</td></tr>
<tr><td>ಬಳ್ಳಾರಿ</td><td>1</td><td>178.38</td><td>ಪ್ರಗತಿಯಲ್ಲಿದೆ</td></tr>
<tr><td>ಕೊಪ್ಪಳ</td><td>1</td><td>178.38</td><td>ಪ್ರಗತಿಯಲ್ಲಿದೆ</td></tr>
<tr><td>ವಿಜಯನಗರ</td><td>1</td><td>178.38</td><td>ಪ್ರಗತಿಯಲ್ಲಿದೆ</td></tr>
<tr><td>2024-25</td><td>ವಿಜಯಪುರ</td><td>1</td><td>210.25</td><td>ಪ್ರಗತಿಯಲ್ಲಿದೆ.</td></tr>
<tr><td rowspan="3">2025-26</td><td>ವಿಜಯಪುರ</td><td>4</td><td>841.00</td><td>ಪ್ರಾರಂಭವಾಗಬೇಕಿದೆ</td></tr>
<tr><td>ರಾಯಚೂರು</td><td>1</td><td>210.25</td><td>ಪ್ರಾರಂಭವಾಗಬೇಕಿದೆ</td></tr>
<tr><td>ಕೊಪ್ಪಳ</td><td>1</td><td>210.25</td><td>ಪ್ರಾರಂಭವಾಗಬೇಕಿದೆ</td></tr>
</table>
</td></tr>
<tr><td>ಆ)</td><td>ಎಷ್ಟು ಪ್ರೌಢಶಾಲೆಗಳಲ್ಲಿ ಸುಸಜ್ಜಿತವಾದ ಶೌಚಾಲಯ ನಿರ್ಮಾಣ ಮಾಡಲಾಗಿದೆ; ಎಷ್ಟು ಶಾಲೆಗಳಲ್ಲಿ ಶೌಚಾಲಯಗಳು ಲಭ್ಯವಿರುವುದಿಲ್ಲ; ಎಲ್ಲಾ ಶಾಲೆಗಳಿಗೆ ಶೌಚಾಲಯ ಸೌಲಭ್ಯ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಕಳೆದ ನಾಲ್ಕು ವರ್ಷಗಳಲ್ಲಿ 1452 ಪ್ರೌಢಶಾಲೆಗಳಲ್ಲಿ 1777 ಶೌಚಾಲಯ ನಿರ್ಮಾಣ ಮಾಡಲು ಕ್ರಮಹಿಸಲಾಗಿದೆ.<br><br>ಎಸ್. ಎಸ್.ಕೆ. ವತಿಯಿಂದ ಕಳೆದ 03 ವರ್ಷಗಳಲ್ಲಿ 109 ಬಾಲಕರ, 80 ಬಾಲಕಿಯರ ಹಾಗೂ 114 ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗಾಗಿ ಶೌಚಾಲಯ ನಿರ್ಮಿಸಲು ಅನುದಾನ ಬಿಡುಗಡೆ ಮಾಡಲಾಗಿದೆ.<br>ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ</td></tr>
</table>

ಮಾಡುವ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಶೌಚಾಲಯಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಅನುಗುಣವಾಗಿ ಶೌಚಾಲಯಗಳನ್ನು ನಿರ್ಮಿಸಿ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ;

| ಕ್ರ.ಸಂ. | ವರ್ಷ | ಮಂಜೂರಾದ ಶಾಲೆಗಳು | ಶೌಚಾಲಯಗಳ ಸಂಖ್ಯೆ | ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ |
|---|---|---|---|---|
| 01 | 2022-23 | | | 3500.00 |
| 02 | 2023-24 | 6962 | 7650 | 8000.00 |
| 03 | 2024-25 | | | 12106.65 |
| 04 | 2025-26 | 1250 | 1582 | 6328.00 |
| **ಒಟ್ಟು** | | **8212** | **9232** | **29934.65** |

ಇ) ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಬಾಲಕರ ಮತ್ತು ಬಾಲಕಿಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಒಟ್ಟು 9,59,530 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ವಿವರ ಈ ಕೆಳಕಂಡಂತಿದೆ;

| ಬಾಲಕರು | ಬಾಲಕಿಯರು |
|---|---|
| 475479 | 484051 |

ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿರಿಸಿದೆ.

ಈ) ಕಳೆದ ಮೂರು ವರ್ಷಗಳಲ್ಲಿ ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ಬಿಟ್ಟ ಬಾಲಕಿಯರ ಮತ್ತು ಬಾಲಕರ ಸಂಖ್ಯೆ ಎಷ್ಟು; ( ಜಿಲ್ಲಾವಾರು, ವರ್ಷವಾರು ವಿವರ ನೀಡುವುದು);

ಕಳೆದ ಮೂರು ವರ್ಷಗಳಲ್ಲಿ ಪ್ರೌಢಶಾಲಾ ಹಂತದಲ್ಲಿ ಶಾಲೆಯನ್ನು ಬಿಟ್ಟ ಬಾಲಕಿಯರ ಮತ್ತು ಬಾಲಕರ ಸಂಖ್ಯೆ ಈ ಕೆಳಕಂಡಂತಿರುತ್ತದೆ;

| Sl. No | District | 2023-24 | | 2024-25 | | 2025-26 | |
|---|---|---|---|---|---|---|---|
| | | BOY | GIRL | Boys | Girls | Boys | Girls |
| 1 | BAGALKOT | 343 | 276 | 28 | 22 | 20 | 7 |
| 2 | BALLARI | 34 | 24 | 16 | 19 | 14 | 14 |
| 3 | BELAGAVI | 1 | 2 | 18 | 12 | 40 | 35 |
| 4 | BELAGAVI CHIKKODI | 4 | 1 | 2 | 6 | 18 | 26 |
| 5 | BENGALURU RURAL | 35 | 20 | 11 | 5 | 12 | 36 |
| 6 | BENGALURU U NORTH | 12 | 1 | 108 | 43 | 21 | 15 |
| 7 | BENGALURU U SOUTH | 9 | 9 | 52 | 29 | 78 | 43 |
| 8 | BIDAR | 6 | 8 | 0 | 0 | 89 | 50 |
| 9 | CHAMARAJANAGARA | 245 | 125 | 61 | 23 | 3 | 1 |
| 10 | CHIKKABALLAPURA | 4 | 3 | 20 | 5 | 17 | 6 |
| 11 | CHIKKAMAGALURU | 4 | 1 | 51 | 13 | 84 | 48 |

| | | | | | | | |
|---|---|---|---|---|---|---|---|
| 12 | CHITRADURGA | 30 | 13 | 64 | 42 | 18 | 6 |
| 13 | DAKSHINA KANNADA | 17 | 6 | 9 | 5 | 0 | 0 |
| 14 | DAVANAGERE | 286 | 115 | 76 | 33 | 142 | 103 |
| 15 | DHARWAD | 156 | 70 | 45 | 14 | 11 | 4 |
| 16 | GADAG | 29 | 11 | 24 | 20 | 31 | 23 |
| 17 | HASSAN | 16 | 11 | 5 | 1 | 23 | 10 |
| 18 | HAVERI | 414 | 161 | 0 | 0 | 0 | 0 |
| 19 | KALABURGI | 1166 | 913 | 114 | 86 | 140 | 130 |
| 20 | KODAGU | 0 | 0 | 11 | 9 | 0 | 0 |
| 21 | KOLAR | 5 | 2 | 6 | 6 | 8 | 7 |
| 22 | KOPPAL | 80 | 52 | 552 | 306 | 213 | 174 |
| 23 | MANDYA | 13 | 11 | 28 | 14 | 33 | 14 |
| 24 | MYSURU | 73 | 41 | 9 | 6 | 75 | 51 |
| 25 | RAICHUR | 11 | 12 | 3 | 2 | 69 | 94 |
| 26 | RAMANAGARA | 19 | 10 | 0 | 0 | 45 | 1 |
| 27 | SHIVAMOGGA | 31 | 8 | 39 | 8 | 0 | 0 |
| 28 | TUMAKURU | 32 | 10 | 44 | 25 | 33 | 17 |
| 29 | TUMAKURU MADHUGIRI | 2 | 1 | 14 | 13 | 3 | 0 |
| 30 | UDUPI | 36 | 28 | 35 | 12 | 8 | 1 |
| 31 | UTTARA KANNADA | 3 | 1 | 2 | 0 | 26 | 0 |
| 32 | UTTARA KANNADA SIRSI | 29 | 31 | 27 | 4 | 0 | 3 |
| 33 | VIJAYANAGAR | 165 | 106 | 25 | 11 | 101 | 101 |
| 34 | VIJAYAPURA | 20 | 8 | 4 | 8 | 7 | 2 |
| 35 | YADAGIRI | 106 | 87 | 27 | 31 | 175 | 154 |
| | Total | 3436 | 2178 | 1530 | 833 | 1557 | 1176 |

| | | |
|---|---|---|
| ಉ) | ನೆರೆ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ ಹೋಲಿಸಿದಲ್ಲಿ, ರಾಜ್ಯದಲ್ಲಿ ಪ್ರೌಢಶಾಲಾ ಬಾಲಕಿಯರ ಡ್ರಾಪ್ ಔಟ್ ಪ್ರಮಾಣ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಶಾಲೆಗಳಲ್ಲಿ ಡ್ರಾಪ್ ಔಟ್ ಪ್ರಮಾಣ ತಗ್ಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಡ್ರಾಪ್ ಔಟ್ ಪ್ರಮಾಣ ತಗ್ಗಿಸಲು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಸರ್ಕಾರವು ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತಿವೆ.<br><br>1. ಪ್ರಸ್ತುತ ಶೈಕ್ಷಣಿಕ ವರ್ಷದಿಂದ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ "ನಿರಂತರ ಡಿಜಿಟಲ್ ಹಾಜರಾತಿ ವ್ಯವಸ್ಥೆ" (Nirantara Facial Digital Attendance System) ಎಂಬ ಕೃತಕ ಬುದ್ಧಿಮತ್ತೆ (Artificial Intelligence-AI) ಆಧಾರಿತ ಹಾಜರಾತಿ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೊಳಿಸಿದೆ.ಎಐ ಆಧಾರಿತ ಡಿಜಿಟಲ್ ಹಾಜರಾತಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ.<br>2. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ವಿದ್ಯಾವಾಹಿನಿ ಪೋರ್ಟಲ್ ಮೂಲಕ ಗುರುತಿಸುವ ಸಮೀಕ್ಷೆ ನಡೆಸಲಾಗುತ್ತದೆ.<br>3. ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ಜೂನ್ ಮತ್ತು ಜುಲೈ ತಿಂಗಳಲ್ಲಿ ವಿಶೇಷ ದಾಖಲಾತಿ ಆಂದೋಲನವನ್ನು |

| | | |
|---|---|---|
| | | ಆಯೋಜಿಸಲಾಗುತ್ತದೆ. ಇದರಿಂದ, ಶಿಕ್ಷಣದ ಮಹತ್ವದ ಕುರಿತು ಪೋಷಕರು ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ.<br>4. ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (SDMC) ಸಭೆಗಳು ಹಾಗೂ ಪೋಷಕ-ಶಿಕ್ಷಕರ ಸಭೆಗಳನ್ನು ನಿಯಮಿತವಾಗಿ Mega Parent Teacher Meeting ನಡೆಸಲಾಗುತ್ತದೆ.<br>5. ಶಾಲೆಯಿಂದ ಹೊರಗುಳಿದ ಹಾಗೂ ಶಾಲೆಗೆ ದಾಖಲಾಗದ ಮಕ್ಕಳನ್ನು ಸಮೀಪದ ಶಾಲೆಗಳಿಗೆ ದಾಖಲು ಮಾಡಲಾಗುತ್ತದೆ.<br>6. ವಯೋಮಾನಕ್ಕೆ ಅನುಗುಣವಾಗಿ ದಾಖಲಾತಿ ಕಲ್ಪಿಸುವ ಉದ್ದೇಶದಿಂದ ಸೇತುಬಂಧ ಶಿಕ್ಷಣ (Bridge Course) , ಪರಿಹಾರಾತ್ಮಕ (Remedial) ಬೋಧನೆ ಸೇರಿದಂತೆ ಶಾಲಾ ಆಧಾರಿತ ತರಬೇತಿಯನ್ನು ನೀಡಲಾಗುತ್ತದೆ.<br>7. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಿಕ್ಷಣವನ್ನು ಸ್ಥಗಿತಗೊಳಿಸಿದ ಮಕ್ಕಳನ್ನು ಗುರುತಿಸಿ, ನವೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳುವ "ಜಾಗೃತಿ ದಾಖಲಾತಿ ಆಂದೋಲನ" ಎಂಬ ವಿಶೇಷ ಜಾಗೃತಿ ಅಭಿಯಾನದ ಮೂಲಕ ಮಕ್ಕಳನ್ನು ಮರುದಾಖಲಾತಿ ಮಾಡಲಾಗುತ್ತದೆ.<br>8. ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ, ಸಮೀಪದಲ್ಲಿ ವಿಶೇಷ ಶಾಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಮನೆ ಆಧಾರಿತ ಶಿಕ್ಷಣ (Home-Based Education) ಒದಗಿಸುತ್ತಿದೆ. ವಿಶೇಷ ಅಗತ್ಯವುಳ್ಳ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ (OoSC) ವಿಶೇಷ ಶಿಕ್ಷಕರ (BIERTs) ಸಹಾಯವನ್ನು ಒದಗಿಸಲಾಗುತ್ತಿದೆ. ಮಕ್ಕಳ ಅಂಗವೈಕಲ್ಯದ ಸ್ವರೂಪವನ್ನು ಆಧರಿಸಿ ಸಾರಿಗೆ ಭತ್ಯೆ, ಬೆಂಗಾವಲು (Escort) ಭತ್ಯೆ, ಓದುಗರ (Reader) ಭತ್ಯೆ ಹಾಗೂ ಬಾಲಕಿಯರ ವಿಶೇಷ ಭತ್ಯೆಗಳನ್ನು ನೀಡಲಾಗುತ್ತಿದೆ. ಅಗತ್ಯವಿರುವ ಸಹಾಯಕ ಸಾಧನಗಳು ಮತ್ತು ಸಲಕರಣೆಗಳನ್ನೂ ಒದಗಿಸಲಾಗುತ್ತದೆ.<br>9. ಹೆಣ್ಣು ಮಕ್ಕಳ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಕ್ಷೇಮವನ್ನು ಉತ್ತೇಜಿಸುವ ಉದ್ದೇಶದಿಂದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಸ್ವ ರಕ್ಷಣಾ ಕೌಶಲ್ಯ ತರಬೇತಿ ನೀಡಲಾಗುತ್ತಿದೆ.<br>10. ಶಿಕ್ಷಣ ಹಕ್ಕು ಕಾಯ್ದೆ (RTE) ಅಡಿಯಲ್ಲಿ ನಿಗದಿಪಡಿಸಿರುವ ನೆರೆಹೊರೆಯ ಶಾಲಾ (Neighbourhood) ಮಾನದಂಡಗಳ ಅನುಸಾರ, ದೂರದ ಅರಣ್ಯ ಪ್ರದೇಶಗಳು, ಗುಡ್ಡಗಾಡು ಪ್ರದೇಶಗಳು, ನದಿತೀರಗಳು, ಕಾಲುವೆ ಪ್ರದೇಶಗಳು ಹಾಗೂ ರಾಷ್ಟ್ರೀಯ ಅಥವಾ ರಾಜ್ಯ ಹೆದ್ದಾರಿಗಳಿಂದ ಪ್ರತ್ಯೇಕಗೊಂಡು ಶಾಲೆಗೆ ಸುಲಭವಾಗಿ ತಲುಪಲು ಸಾಧ್ಯವಾಗದ ಪ್ರದೇಶಗಳಲ್ಲಿ ವಾಸಿಸುವ ಅರ್ಹ ಮಕ್ಕಳಿಗೆ, ಶಾಲೆಗೆ ನಿಯಮಿತವಾಗಿ ಹಾಜರಾಗುವುದನ್ನು |

| | | | |
|---|---|---|---|
| | | | ಖಚಿತಪಡಿಸುವ ಉದ್ದೇಶದಿಂದ ಸಾರಿಗೆ ಭತ್ಯೆ ಹಾಗೂ ಬೆಂಗಾವಲು ಭತ್ಯೆ ನೀಡಲಾಗುತ್ತಿದೆ.<br>11. ಹೊಸ ಸರ್ಕಾರಿ ಶಾಲೆ/ಪದವಿಪೂರ್ವ ಕಾಲೇಗಳನ್ನು ತೆರೆಯುವುದು ಮತ್ತು ಅವುಗಳ ಉನ್ನತೀಕರಣ ಮಾಡಲಾಗುತ್ತಿದೆ.<br>12. ಶಾಲಾ ಶಿಕ್ಷಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳ ಹಾಜರಾತಿ ಮತ್ತು ಸಮಗ್ರ ಅಭಿವೃದ್ಧಿಗಾಗಿ ಪಿಎಂ ಪೋಷಣ್, ವಿದ್ಯಾ ವಿಕಾಸ, ಪ್ರತಿಭಾ ಕಾರಂಜಿ ಹಾಗೂ ಕಲಾ ಉತ್ಸವ ಯೋಜನೆಗಳ ಅನುಷ್ಠಾನ ಕೈಗೊಳ್ಳಲಾಗಿದೆ.<br>13. ಮಕ್ಕಳ ಶಾಲಾ ಹಾಜರಾತಿಯನ್ನು ಉತ್ತೇಜಿಸಿ, ಶಾಲೆಯಲ್ಲಿ ನಿರಂತರವಾಗಿ ಉಳಿಸಿಕೊಳ್ಳುವ ಉದ್ದೇಶದಿಂದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳಿಗೆ ಪಿಎಂ ಪೋಷಣ್ (PM POSHAN) ಯೋಜನೆ ಅಡಿಯಲ್ಲಿ ಮಧ್ಯಾಹ್ನದ ಬಿಸಿಯೂಟ, ಹಾಲು, ಮೊಟ್ಟೆ, ಬಾಳೆಹಣ್ಣು ಹಾಗೂ ವಿಟಮಿನ್ ಮಾತ್ರೆಗಳನ್ನು ಒದಗಿಸಲಾಗುತ್ತಿದೆ. ಇದಲ್ಲದೆ, ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ಉಚಿತ ಪಠ್ಯಪುಸ್ತಕಗಳು, ನೋಟ್ ಪುಸ್ತಕಗಳು, ಶೂ-ಸಾಕ್ಸ್, ಎರಡು ಜೋಡಿ ಸಮವಸ್ತ್ರಗಳು ಸೇರಿದಂತೆ ವಿವಿಧ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>14. ಅದೇ ರೀತಿ, ಪ್ರತಿಭಾ ಕಾರಂಜಿ ಹಾಗೂ ಕಲಾ ಉತ್ಸವ ಕಾರ್ಯಕ್ರಮಗಳಡಿ ವಿವಿಧ ಹಂತಗಳಲ್ಲಿ ಆಯೋಜಿಸಲಾಗುವ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳಲ್ಲಿ ಎಲ್ಲಾ ಮಕ್ಕಳನ್ನು ಸಕ್ರಿಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವ ಮೂಲಕ ಅವರ ಪ್ರತಿಭೆ ಮತ್ತು ಸೃಜನಶೀಲತೆಯನ್ನು ಬೆಳೆಸಲು ಅವಕಾಶ ಕಲ್ಪಿಸಲಾಗುತ್ತಿದೆ.<br>15. 15 ರಿಂದ 19 ವರ್ಷ ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಮುಕ್ತ ಶಾಲಾ ಶಿಕ್ಷಣ (Open Schooling) ಮೂಲಕ ತಮ್ಮ ಶಿಕ್ಷಣವನ್ನು ಮುಂದುವರಿಸಲು ಆಸಕ್ತಿ ಹೊಂದಿರುವ ಮಕ್ಕಳನ್ನು ರಾಷ್ಟ್ರೀಯ ಹಾಗೂ ಕರ್ನಾಟಕ ಮುಕ್ತ ಶಾಲಾ ಶಿಕ್ಷಣ ಸಂಸ್ಥೆ (NIOS/KOS) ಅಧ್ಯಯನ ಕೇಂದ್ರಗಳಲ್ಲಿ ದಾಖಲಿಸಿ, ಪ್ರೌಢ ಹಾಗೂ ಹಿರಿಯ ಪ್ರೌಢ ಪರೀಕ್ಷೆಗಳಿಗೆ ಹಾಜರಾಗುವಂತೆ ಮಾಡುವ ಮೂಲಕ ಶಿಕ್ಷಣದ ಮುಖ್ಯವಾಹಿನಿಗೆ ಸೇರ್ಪಡೆಗೊಳಿಸಲಾಗುತ್ತಿದೆ.<br>16. 2026–27ನೇ ಶೈಕ್ಷಣಿಕ ವರ್ಷದಲ್ಲಿ, 15 ವರ್ಷ ಮತ್ತು ಮೇಲ್ಪಟ್ಟ 64,573 ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳಿಗೆ ಕರ್ನಾಟಕ ಮುಕ್ತ ಶಾಲಾ ಶಿಕ್ಷಣ (Karnataka Open Schooling) ಮೂಲಕ ಪ್ರೌಢ ಹಾಗೂ ಹಿರಿಯ ಪ್ರೌಢ ಪರೀಕ್ಷೆಗಳಿಗೆ ಹಾಜರಾಗಲು ಕೇಂದ್ರ ಶಿಕ್ಷಣ ಮಂತ್ರಾಲಯದ ಯೋಜನಾ ಅನುಮೋದನಾ ಮಂಡಳಿ (PAB) ಯಿಂದ ಅನುಮೋದನೆ ದೊರೆತಿದೆ. ಇದರ ಮೂಲಕ ಹೆಚ್ಚಿನ ಸಂಖ್ಯೆಯ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ತಮ್ಮ ಶಿಕ್ಷಣವನ್ನು ಪುನರಾರಂಭಿಸಿ ಔಪಚಾರಿಕ ಶಿಕ್ಷಣ |

| | | |
|---|---|---|
| | | ವ್ಯವಸ್ಥೆಗೆ ಬಂದು ಶಿಕ್ಷಣ ಮುಂದುವರೆಸಲು ಅವಕಾಶ ಕಲ್ಪಿಸಲಾಗಿದೆ.<br>17. ಈ ಕ್ರಮಗಳು ಶಿಕ್ಷಣದ ಸಾರ್ವತ್ರಿಕ ಲಭ್ಯತೆಯನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ, ಶಾಲೆಯಿಂದ ಹೊರಗುಳಿಯುವ ಹೆಣ್ಣು ಮಕ್ಕಳ ಸಂಖ್ಯೆಯನ್ನು ಗಣನೀಯವಾಗಿ ತಗ್ಗಿಸಲು ಸಹಕಾರಿಯಾಗಿದೆ.<br>18. ಇಲಾಖೆಯು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು (OoSC) ವಿಶೇಷವಾಗಿ ಹೆಣ್ಣು ಮಕ್ಕಳನ್ನು ಗುರುತಿಸಲು ವ್ಯವಸ್ಥಿತ ಸಮೀಕ್ಷೆಗಳನ್ನು ನಡೆಸಿ, ಗುರುತಿಸಲಾದ ಮಕ್ಕಳನ್ನು ಯಶಸ್ವಿಯಾಗಿ ಔಪಚಾರಿಕ ಶಿಕ್ಷಣದ ಮುಖ್ಯವಾಹಿನಿಗೆ ಸೇರಿಸುವ ಕಾರ್ಯವನ್ನು ನಿರಂತರವಾಗಿ ಕೈಗೊಳ್ಳುತ್ತಿದೆ. |

**ಸಂಖ್ಯೆ: ಇಪಿ 251 ಎಸ್‌ಇಎಸ್ 2026**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-1 : ಸರ್ಕಾರಿ ಪ್ರೌಢಶಾಲೆಗಳಲ್ಲಿ ಜಿಲ್ಲಾವಾರು ದಾಖಲಾತಿ

| Sl.No | District | Total | | |
|---|---|---|---|---|
| | | Boys | Girls | Total |
| 1 | BAGALKOT | 27148 | 28724 | 55872 |
| 2 | BALLARI | 17799 | 20144 | 37943 |
| 3 | BELAGAVI | 18170 | 19399 | 37569 |
| 4 | BELAGAVI CHIKKODI | 33518 | 34130 | 67648 |
| 5 | BENGALURU RURAL | 5384 | 4745 | 10129 |
| 6 | BENGALURU U NORTH | 11719 | 11388 | 23107 |
| 7 | BENGALURU U SOUTH | 13332 | 12561 | 25893 |
| 8 | BIDAR | 9723 | 11557 | 21280 |
| 9 | CHAMARAJANAGARA | 6097 | 5901 | 11998 |
| 10 | CHIKKABALLAPURA | 6760 | 6693 | 13453 |
| 11 | CHIKKAMANGALURU | 6506 | 5829 | 12335 |
| 12 | CHITRADURGA | 8477 | 8522 | 16999 |
| 13 | DAKSHINA KANNADA | 11762 | 10777 | 22539 |
| 14 | DAVANAGERE | 9679 | 9672 | 19351 |
| 15 | DHARWAD | 14317 | 14988 | 29305 |
| 16 | GADAG | 12362 | 13228 | 25590 |
| 17 | HASSAN | 9606 | 9397 | 19003 |
| 18 | HAVERI | 16242 | 16402 | 32644 |
| 19 | KALBURGI | 25002 | 27227 | 52229 |
| 20 | KODAGU | 1715 | 1780 | 3495 |
| 21 | KOLAR | 8022 | 8098 | 16120 |
| 22 | KOPPAL | 27005 | 26955 | 53960 |
| 23 | MANDYA | 9803 | 9250 | 19053 |
| 24 | MYSURU | 17789 | 18091 | 35880 |
| 25 | RAICHUR | 36339 | 37226 | 73565 |
| 26 | RAMANAGARA | 5731 | 5235 | 10966 |
| 27 | SHIVAMOGGA | 12403 | 12254 | 24657 |
| 28 | TUMAKURU | 7706 | 7539 | 15245 |
| 29 | TUMAKURU MADHUGIRI | 6224 | 5819 | 12043 |
| 30 | UDUPI | 8098 | 7433 | 15531 |
| 31 | UTTARA KANNADA | 3607 | 3568 | 7175 |
| 32 | UTTARA KANNADA SIRSI | 7287 | 6992 | 14279 |
| 33 | VIJAYANAGARA | 16935 | 17129 | 34064 |
| 34 | VIJAYAPURA | 23632 | 24961 | 48593 |
| 35 | YADAGIRI | 19580 | 20437 | 40017 |
| | Total | **475479** | **484051** | **959530** |